ನಿಂತಿದ್ದ. ''ಅದು ಮನೆಯಲ್ಲೇ ಹಿಂದಿನಿಂದ ಇದ್ದ ದನದ ಕರು. ನಮ್ಮಲ್ಲೇ ಬೆಳೆದದ್ದು. ಯಾವ ದಾಖಲೆ ಪತ್ರಗಳೂ ಇಲ್ಲ. ಗಬ್ಬದ ದನ ಅಂತ ಕಂಪ್ಲೇಂಟಿನಲ್ಲಿ ಹೇಳಿದ್ದೇನೆ. ಅದನ್ನು ಬೇಕಾದರೆ ಪಶುವೈದ್ಯರಲ್ಲಿ ಖಚಿತ ಪಡಿಸಿಕೊಳ್ಳಿ'' ಅಂದರು ಮೂರ್ತಿ. ''ನೀವು ಬೇಕಿದ್ದರೆ ಇನ್ನೊಂದು ಟೆಸ್ಟ್ ಮಾಡಬಹುದು. ಅದರ ಹಗ್ಗ ಬಿಚ್ಚಿ ನನ್ನ ಕೈಯಲ್ಲಿ ಹಿಡಿದು ನಾನು ಮುಂದೆ ಹೋಗುತ್ತೇನೆ. ಒಮ್ಮೆಯೂ ಹಗ್ಗವನ್ನು ಬಲ ಹಾಕಿ ಎಳೆಯದೆ ಮನೆಯ ವರೆಗೂ ದನ ನನ್ನ ಹಿಂದೆಯೇ ಬರುವುದನ್ನು ನೀವು ನೋಡಬಹುದು'' ಭಾವುಕರಾಗಿ ನುಡಿದರು ಮೂರ್ತಿ.

ಪೇದೆ ಸರ್ಕಲ್ ಬಳಿ ಹೋಗಿ ಬಂದರು. ''ಇದು ನಿಮ್ಮ ದನ, ನಮಗೆ ಗೊತ್ತಿದೆ. ಆದರೆ ದಾಖಲೆಗಾಗಿ ನಾವು ಒಂದು ಶರತ್ತಿನಲ್ಲಿ ದನ ನಿಮ್ಮ ಕೈಗೆ ಕೊಡುತ್ತೇವೆ. ಬೇರೆ ಯಾರಾದರೂ ಈ ದನ ಅವರದು ಎಂದು ದಾವೆ ಹೂಡಿದರೆ ದನವನ್ನು ವಾಪಸ್ ತಂದು ಇಲ್ಲಿ ಒಪ್ಪಿಸಿ ತನಿಖೆಗೆ ಸಹಕರಿಸುತ್ತೇನೆ ಅಂತ ಬಾಂಡ್ ಬರೆದುಕೊಡಬೇಕು ನೀವು. ಈ ಶರತ್ತಿನಲ್ಲಿ ದನ ಬಿಡುಗಡೆ ಮಾಡಿ ಅಂತ ಸರ್ಕಲ್ ಇನ್‌ಸ್ಪೆಕ್ಟರ್ ಹೇಳಿದರು'' ಅಂದರು ಪೇದೆ.

''ಓಹೋ... ಧಾರಾಳವಾಗಿ ಬರೆದುಕೊಡ್ತೇನೆ'' ಅಂದರು ಮೂರ್ತಿ. ಮೂರ್ನಾಲ್ಕು ಕಾಗದಪತ್ರಗಳಲ್ಲಿ ಸಹಿ ಪಡೆದು ''ಗೋಪಾಲ, ಅವರ ದನದ ಹಗ್ಗಬಿಡಿಸಿಕೊಡಿ'' ಎಂದರು.

ಮೂರ್ತಿ ಗಂಭೀರವಾಗಿ ದನದ ಹಗ್ಗ ಪಡೆದು ಅದನ್ನು ಅದರ ಕೊಂಬಿಗೇ ಪೂರ್ತಿಯಾಗಿ ಸುತ್ತಿ ''ಬಾ. ಬಾ... ಹೋಗೋಣ'' ಎಂದು ಬರಿಗೈಯಲ್ಲಿ ಮುಂದೆ ಸಾಗಿದರು. ಪೊಲೀಸರೆಲ್ಲ ಬೆರಗಾಗಿ ನೋಡುತ್ತಿದ್ದಂತೆ ದನ ಅವರ ಹಿಂದೆಯೇ ನಡೆಯಿತು!

ದನವನ್ನು ಗೋಪಾಲನ ಸೂಚನೆಯಂತೆ ಪಶುವೈದ್ಯರಿಗೂ ತೋರಿಸಿ ಮನೆಗೆ ಕರೆತಂದರು ಮೂರ್ತಿ. ಆವತ್ತಿನ ಅಲೆದಾಟದಿಂದ ಸುಸ್ತಾಗಿ ಮಧ್ಯಾಹ್ನ ಊಟ ಮಾಡಿ ಒರಗಿಕೊಂಡಿದ್ದಾಗ ಗೌರಿಯಮ್ಮ ಫೋನ್ ಮಾಡಿ ''ಇಲ್ನೋಡೀ ನೀವು ತಾತ ಆಗಿಬಿಟ್ರಿ. ಗಂಡು ಮಗು ಹೆತ್ತಿದ್ದಾಳೆ. ನಾರ್ಮಲ್ಲು ಡೆಲಿವರಿ. ಇಬ್ರೂ ಆರೋಗ್ಯವಾಗಿದ್ದಾರೆ'' ಎಂದು ಸಂಭ್ರಮದಲ್ಲಿ ಹೇಳುತ್ತಿದ್ದಂತೆಯೆ ''ಹೌದಾ... ಸಂತೋಷವಾಯಿತು. ಇಲ್ಲಿ ದನ ಸಿಕ್ಕಿದೆ. ಕರಕೊಂಡು ಮನೆಗೆ ಬರುವಾಗ ದಾರಿಯಲ್ಲಿ ಪಶುವೈದ್ಯರಿಗೂ ತೋರಿಸಿದೆ. ಸ್ವಲ್ಪ ವೀಕ್ ಆಗಿರೋದು ಬಿಟ್ಟರೆ ಏನೂ ತೊಂದರೆ ಇಲ್ಲ. ನೀವೇ ಜಾಗ್ರತೆ ತೆಗೆದುಕೊಳ್ಳಿ. ಹದಿನೈದು ದಿನದಲ್ಲಿ ಕರು ಹಾಕುತ್ತೆ ಅಂದಿದ್ದಾರೆ. ಹಾಗೆ ಖುಷಿಯಲ್ಲಿದ್ದೀನಿ'' ಎಂದು ತನ್ನ ಕಡೆಯ ಶುಭಸುದ್ದಿಯನ್ನೂ ತೇಲಿಸಿಯೇ ಬಿಟ್ಟರು.

ಸುದ್ದಿತಿಳಿದ ಅಳಿಯ ಫೋನ್ ಮಾಡಿದ. ''ಮಾವ, ದನ ಸಿಕ್ತಂತಲ್ಲ... ಅದನ್ನ ಕುಂದಾಪುರಕ್ಕೆ ಯಾವಾಗ ಸಾಗಿಸುತ್ತೀರಿ ಮತ್ತೆ ಯಾವಾಗ ದುಬೈಗೆ ಬರ್ತೀರಿ?'' ಪ್ರಶ್ನೆ ಹಾಕಿದ.

''ಅಯ್ಯೋ... ಕುಂದಾಪುರಕ್ಕೆ ಸಾಗಾಟ ಕಷ್ಟ ಮಹರಾಯ. ಟಿಕೇಟ್ ಮಾಡಿಸಿ ದುಬೈಗೇ ವಿಮಾನ ಹತ್ತಿಸಿದರೆ ಹೇಗೆ ಎಂದು ಆಲೋಚಿಸುತ್ತಿದ್ದೇನೆ'' ಎಂದು ಹೇಳಿ ಮನಸಾರೆ ನಕ್ಕರು ಮೂರ್ತಿ!

## ಗೋಪೀನಾಥ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟ್ಪಾಡಿ. ತಂದೆ ಪ್ರಸಿದ್ಧ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ತಾಯಿ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಅವರ ಪ್ರಕಟಿತ ಕಥಾಸಂಕಲನಗಳು.